ಶಿವರಾಜ ವಿಭೂತಿ, ಹರಿಹರ

*ಗಂಡಸರಿಗೆ ಬೇಜಾರಾದರೆ ಬಾರ್; ಹೆಂಗಸರಿಗೆ ಬೇಜಾರಾದರೆ?*



ಶಾಪಿಂಗ್ ಮಾಡಿ ಗಂಡನ ಇಡೀ ಬ್ಯಾಂಕ್ ಬ್ಯಾಲೆನ್ಸ್ ಢಮಾರ್.

ಜಿ. ವಿಶ್ವನಾಥ, ಗೊಂಡೇದಹಳ್ಳಿ

*ಜೀವನವನ್ನು ತಪಸ್ಸು ಎಂದು ಭಾವಿಸದೆ ಉದ್ಯಮವೆಂದೆಣಿಸಿ ಬರೀ ಲಾಭದೆಡೆಗೆ ನೋಡುತ್ತಾರಲ್ಲ?*

ಅವರ ತಪ್ಪಲ್ಲ. ತಪೋಭಂಗಿಯಲ್ಲಿದ್ದರೆ ನಮ್ಗೂ ಯೋಗಾಸನ ಹೇಳ್ಕೊಡಿ ಅಂತ ಜನ ಫೀಸ್ ಸಮೇತ ಬರ್ತಾರೆ.


ನಳಿನಿ ಮಾಗಲ್, ಸಕಲೇಶಪುರ

*ಎಲ್ಲರ ಪ್ರಶ್ನೆಗೂ ಉತ್ತರಿಸುವ ತಾವು ತಮ್ಮ ಶ್ರೀಮತಿಯವರಿಗೂ ಪ್ರೈಯಾರಿಟಿ ಕೊಡ್ತೀರಾ?*

ನಾನು ಪಳಗಿದ್ದೇ ಆ ಗರಡಿಯಲ್ಲಿ. ಅವಳ ಪ್ರಶ್ನೆಗಳ ಕಗ್ಗಂಟಿನ ಮುಂದೆ ಇವೆಲ್ಲಾ ಬೇಬಿ ನರ್ಸರಿ ಪ್ರಶ್ನೆಗಳು.

ಕೆ.ಎಂ. ವೀರೇಶ್, ಕೂಡ್ಲಿಗಿ

*ಮಾನವಂತರಿಗೆ ಮರ್ಯಾದೆಯೇ ಆಸ್ತಿ. ಮಾನಗೆಟ್ಟವರಿಗೆ?*




ಊರೆಲ್ಲಾ ಆಸ್ತಿ.

ರ.ಶಿ. ಯಡಹಳ್ಳಿ, ಬೀಳಗಿ

*ಸಮರಕ್ಕೂ, ವಾಕ್‌ಸಮರಕ್ಕೂ ಏನು ವ್ಯತ್ಯಾಸ?*

ಸಮರಕ್ಕೆ ಬಹಳ ಜನಗಳು ಬೇಕು. ವಾಕ್‌ಸಮರಕ್ಕೆ ಅರ್ನಾಬ್ ಗೋಸ್ವಾಮಿ ಒಬ್ಬರೇ ಸಾಕು.

ಕುಬೇರಪ್ಪ ವಿಭೂತಿ, ಹರಿಹರ

*ಮೊಬೈಲ್ ಸಂಸ್ಕೃತಿಯಲ್ಲಿ ಸಂಸ್ಕಾರವಂತ ಯುವಪೀಳಿಗೆ ಬರಲು ಸಾಧ್ಯವೆ?*

ನಮ್ಮ ಬಾಯಲ್ಲೇ ಮಂತ್ರವೂ ಇರತ್ತೆ, ಉಗುಳೂ ಇರತ್ತೆ. ಆಯ್ಕೆ ನಮ್ಮದು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಕಿರುಬೆರಳಿನಿಂದ ಬೆಟ್ಟ ಎತ್ತಿದ ಕೃಷ್ಣ. ಕಿರುಬೆರಳಿನಿಂದ ಇಲ್ಲೊಬ್ಬಳು ಗಂಡನನ್ನು ಆಡಿಸುತ್ತಾಳಲ್ಲಾ...?*

ಅವನದೇ ತಪ್ಪು. ಬೆಟ್ಟದಂತೆ ಬಿದ್ದಲ್ಲೇ ಬಿದ್ದಿರದೆ ಹೊರಹೋಗಲು ಹೇಳಿ.

ಜಿ. ಶಿವಪ್ರಸಾದ, ಬೆಂಗಳೂರು

*ಹಿಂದಿನ ಗಾದೆಯನ್ನು 'ಕೀರ್ತಿಗೊಬ್ಬ ಮಗಳು, ಹೆಸರಿಗೊಬ್ಬ ಮಗ' ಎಂದು ಬದಲಾಯಿಸಿದರೆ ಹೇಗೆ?*

ಹೊರಕ್ಕೆ (ಪರ ಮನೆಗೆ) ಒಬ್ಬ ಮಗಳು, ಹೊರೋಕ್ಕೆ (ಕಡೆಯಲ್ಲಿ) ಒಬ್ಬ ಮಗ ಎಂದೂ ಬದಲಾಯಿಸಬಹುದು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ನ್ಯಾಯದೇವತೆಯೇ ಯಾಕೆ, ನ್ಯಾಯದೇವ ಯಾಕಿಲ್ಲ?*

ಹೆಣ್ಣಾದರೆ ಸ್ವಲ್ಪವಾದ್ರೂ ಫಾಲೋ ಮಾಡ್ತಾರೇಂತ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಕೈಲಾಗದ ಗಂಡ ಕೈಲಾಸ ಕಂಡ ಅಂತಾರೆ. ಕೈಲಾಗದ ಹೆಂಡತಿ ಏನನ್ನು ಕಾಣುವಳು?*

ಕ್ಷೀರಸಾಗರ ಹೊಟೆಲ್, ಕೈಲಾಸ್ ಕ್ಲಿನಿಕ್, ತ್ರಿಲೋಕ ಲ್ಯಾಬ್ಸ್, ವೈಕುಂಠ ಮೆಡಿಕಲ್ಸ್.....

ಪೇಂಟರ್ ಪಾಪು, ಸಂತೇಮರಹಳ್ಳಿ

*ಕೆಲವೊಂದನ್ನು ಗೊತ್ತಿದ್ದರೂ ಬಿಡಿಸಿ ಹೇಳಲು ಆಗುವುದಿಲ್ಲವಂತೆ. ಯಾಕೆ?*

ಬಿಡಿಸಿದರೆ ಬಂಧ ಕಳೆದು ಚಿಲ್ಲರೆ ಆಗಿಬಿಡುತ್ತದೆ.

ಜಾಕೋಬ್ ಡಿಸೋಜ, ಕುರುವಳ್ಳಿ

*ರಾಜಕಾರಣಿ ಹಾಗೂ ಸಾಮಾನ್ಯ ಮನುಷ್ಯ ಇವರಿಗಿರುವ ವ್ಯತ್ಯಾಸವೇನು?*

ಹಲವಾರು ಕೋಟಿ ರೂಪಾಯಿಗಳು.

ಕೆ.ಎಂ. ಲಿಂಗರಾಜು, ನಂಜನಗೂಡು

*ಭೀತಿಗೂ, ಪ್ರೀತಿಗೂ ಏನು ವ್ಯತ್ಯಾಸ?*

ಪ್ರೀತಿ ಹುಟ್ಟಿಸುವವನು ಡಿಯರೆಸ್ಟು, ಭೀತಿ ಹುಟ್ಟಿಸುವವನು ಟೆರರಿಸ್ಟು.

## ಬಹುಮಾನಿತ ಪ್ರಶ್ನೆ

ಎನ್. ಗೋಪಾಲರಾವ್, ಹೊಸಕೆರೆಹಳ್ಳಿ

*ಕವಿಶ್ರೇಷ್ಠನಾಗಬೇಕೆಂದಿದ್ದೇನೆ. ಇದಕ್ಕಾಗಿ ಯಾವ ಶಾಲೆಯಲ್ಲಿ ಓದಬೇಕು? ಯಾರ ಮಾರ್ಗದರ್ಶನ ಪಡೆಯಬೇಕು?*

ಮುಗ್ಧತೆಯ ಶಾಲೆ; ಹೃದಯದ ಭಾಷೆಯ ಮಾರ್ಗದರ್ಶನ.

ಶೋಭಾ ಬಿ.ಆರ್. ಹೊಳೆನರಸಿಪುರ

*ಆಕಾಶ ಗುಡುಗಿದರೆ ಅಣಬೆ ಏಳತ್ತೆ. ರಾಜಕಾರಣಿ ಗುಡುಗಿದರೆ...?*

ನಾಯಿಕೊಡೆ ಇರಲಿ, ನಾಯಿಯೂ ಏಳುವುದಿಲ್ಲ.

ಶೋಭಾ ಶ್ರೀಪತಿ, ಹೊಳೆನರಸಿಪುರ

*ಮದುವೆ ಆಗಿರೋ ಹೆಣ್ಣು ಮೊದಲು ಗೃಹಿಣಿ, ನಂತರ ಹೌಸ್‌ವೈಫ್, ಈಗ ಹೋಮ್ ಮೇಕರ್. ಮುಂದೆ?*

ಗಂಡನ್ನು ಗಂಡನಾಗಿ ಬದಲಿಸುವುದರಿಂದ – ಮೇಲ್ ಕನ್ವರ್ಟರ್.

ಆರ್.ಸಿ. ಪರಶುರಾಮ್, ಶಿಕಾರಿಪುರ

*ರಾಜಕಾರಣವನ್ನು ಕಲಿಯುವ ಸುಲಭಮಾರ್ಗ ಥಿಯರಿಯೋ, ಪ್ರಾಕ್ಟಿಕಲ್ಲೋ?*




ವಿಷುಯಲ್ಲು! ದಿನವೂ ಕ್ರೈಮ್ ಸ್ಟೋರಿ, ಬ್ರೇಕಿಂಗ್ ನ್ಯೂಸ್ ನೋಡಿದರೆ ಒಳ್ಳೆಯ ರಾಜಕಾರಣಿಯಾಗಬಹುದು.

ಬಿ, ಚಂದ್ರೇಗೌಡ, ಬೆಂಗಳೂರು

*ಮದುವೆ ಬೇಡ. ಆದರೆ ಮಗು ಬೇಕು ಎನ್ನುವ ಲಲನೆಯರಿಗೆ ನಿಮ್ಮ ಕಿವಿಮಾತು?*

ಅಕ್ರಮವಾಗಿ ಹುಟ್ಟಿ ತೊಟ್ಟಿಭಾಗ್ಯ ಪಡೆದ ಮಗುವಿಗೆ ತೊಟ್ಟಿಲುಭಾಗ್ಯ ನೀಡುವ ನಿಮ್ಮ ಸ್ಕೀಂಗೆ ಹ್ಯಾಟ್ಸ್ ಆಫ್.

ನವಿರವಿ, ಬಾಳೆಹೊನ್ನೂರು

*ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಹಕ್ಕು. ಸೊಸೆಗೆ?*

ಮಗನಿಗೆ ಹಕ್ಕು. ಮಗನ ಮೇಲೆ ಸೊಸೆಗೆ ಸಂಪೂರ್ಣ ಹಕ್ಕು.

■ ರಾಮ್